ನೋಡಿದಾಗ ನಗರ ಪ್ರದೇಶದ ಶಾಲೆಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಶಿಕ್ಷಕರು ಇದ್ದಾರೆ. ಅವರನ್ನು ವರ್ಗಾವಣೆ ಮಾಡಿದರೂ ಗ್ರಾಮಾಂತರ ಪ್ರದೇಶಗಳಿಗೆ ಹೋಗುತ್ತಿಲ್ಲವೆಂದು ಕೇಳಿಬಂದಿದೆ. ಆ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ ? ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ಕಡೆ ಶಾಲಾ ಕಟ್ಟಡಗಳಿಂ ಬೀಳುವ ಸ್ಥಿತಿಯಲ್ಲಿವೆ. ಅಲ್ಲಿ ವಿದ್ಯಾರ್ಥಿಗಳು ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಕೂಡುವ ಪರಿಸ್ಥಿತಿ ಇದೆ. ಅವುಗಳ ದುರಸ್ಥಿಗೆ ಆದ್ಯತೆ ಮೇಲೆ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಹೆಚ್. ಸಿ. ಗೋವಿಂದೇಗೌಡ —ಶಾಸಕರು ಏನು ಅಭಿಪ್ರಾಯಪಟ್ಟಿದ್ದಾರೆ ಅದು ನಿಜ. ಹಳ್ಳಿಗಳಿಗೆ ಹೋಗತಕ್ಕ ಶಿಕ್ಷಕರ ಸಂಖ್ಯೆ ಕಡಿಮೆ ಇದ್ದು ಪಟ್ಟಣಗಳಲ್ಲಿ ಹೆಚ್ಚು ಮಂದಿ ಇರುವುದನ್ನು ನೋಡುತ್ತೇವೆ. ಆ ಬಗ್ಗೆ, ಸೂಕ್ತವಾದ ಕಾರ್ಯಕ್ರಮ ತೆಗೆದುಕೊಂಡು ಅವರನ್ನು ಹಳ್ಳಿಗಳಿಗೆ ಕಳುಹಿಸತಕ್ಕ ವ್ಯವಸ್ಥೆ ಮಾಡುತ್ತೇನೆ.

ಅಧ್ಯಕ್ಷರು.—ಇನ್ನೂ ೫ ಪ್ರಶ್ನೆಗಳಿವೆ. ಈಗ ಪ್ರಶ್ನೋತ್ತರ ವೇಳೆ ಮುಗಿಯಿತಂ. ಆದ್ದರಿಂದ ಯಾರು ಪ್ರಶ್ನೆ ಹಾಕಿದ್ದಾರೆ ಅವರು ಮಾತ್ರ ಉಪ ಪ್ರಶ್ನೆಯನ್ನು ಕೇಳಿ.

ಪಂಚಾಯಿತಿಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಯನ್ನು ಸರ್ಕಾರಿ ನೌಕರರಂತೆ ಪರಿಗಣಿಸುವುದು

೪೧೪. ಶ್ರೀ ಕೆ. ವಸಂತ ಬಂಗೇರ.—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯಿತಿ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ?

ಅ) ಪಂಚಾಯತ್‌ಗಳಲ್ಲಿ ಕೆಲಸ ಮಾಡುವ ಸಿಬ್ಬಂದಿ ಮತ್ತು ಇತರ ನೌಕರರನ್ನು ಸರ್ಕಾರಿ ನೌಕರರಂತೆ ಪರಿಗಣಿಸಬೇಕಾಗಿ ಸಲ್ಲಿಸಿರುವ ಮನವಿಯ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ.

ಆ) ಸದರಿ ಪಂಚಾಯತ್‌ಗಳಲ್ಲಿ ಹರಿಜನ ಗಿರಿಜನರಿಗೆ ಬಡ್ತಿ ನೀಡುವ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಅಬ್ದುಲ್ ನಜೀರ್ ಸಾಬ್.—(ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).

ಅ) ಇತ್ತೀಚೆಗೆ ಸರ್ಕಾರಕ್ಕೆ ಈ ಬಗ್ಗೆ ಒಂದೆರಡು ಮನವಿಗಳು ಬಂದಿರುತ್ತವೆ. ಹೊಸ ಕಾನೂನಿನ ಪ್ರಕಾರ ಮಂಡಲ್ ಪಂಚಾಯಿಸ್‌ಗಳು ರಚನೆಯಾಗಲಿದ್ದು ಈ ವಿಷಯವು ಸೂಕ್ಷ್ಮವಾಗಿ ಪರಿಶೀಲಿಸಲಾಗುವುದು.

ಆ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಶ್ರೀ ಕೆ. ವಸಂತ ಬಂಗೇರ.—ನನ್ನ (ಅ) ಪ್ರಶ್ನೆಗೆ ಸಚಿವರು ಇತ್ತೀಚೆಗೆ ಸರ್ಕಾರಕ್ಕೆ ಒಂದೆರಡು ಮನವಿಗಳು ಬಂದಿರುತ್ತವೆ, ಹೊಸ ಕಾನೂನು ಪ್ರಕಾರ ಮಂಡಲ್ ಪಂಚಾಯಿತಿಗಳು ರಚನೆಯಾಗಲಿದ್ದು ಈ ವಿಷಯವನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗುವುದೆಂದು ಹೇಳಿದ್ದಾರೆ. ನಾನು ಈಗಾಗಲೇ ಈ ಬಗ್ಗೆ ರೂಲ್ ೩೩ಳಿರ ಕೆಳಗೆ ಪ್ರಶ್ನೆ ಕೇಳಲಿದ್ದು ಅದಕ್ಕೆ ಇನ್ನೂ ಉತ್ತರ ಬಂದಿಲ್ಲ. ಮೈಸೂರು ವಿಭಾಗಾಧಿಕಾರಿಗಳು ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆಯ ೧೫೦೦ಕ್ಕೂ ಹೆಚ್ಚು ಮಂದಿ ಪಂಚಾಯಿತಿಯ ನೌಕರರನ್ನು ಸೇವೆಯಿಂದ ವಿಮುಕ್ತಿಗೊಳಿಸಿ ಆಜ್ಞೆ ಹೊರಡಿಸಿದ್ದಾರೆ. ಇದರಿಂದ ಅಷ್ಟು ಮಂದಿ ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಅವರು ಅನೇಕ ವರ್ಷಗಳಿಂದ ಸರ್ಕಾರೀ ನೌಕರರೆಂದು ಪರಿಗಣಿಸಬೇಕೆಂದು ಕೇಳುತ್ತಿದ್ದಾರಲ್ಲದೆ ಕೇವಲ ೨೦-೩೦-೪೦ ರೂಪಾಯಿ ಸಂಬಳ ಪಡೆದು ಕಳೆದ ೨೦ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಅವರು ವೇತನವನ್ನು ಏರಿಸಿ ಎಂದು ಒತ್ತಾಯಿಸುತ್ತಿರುವಾಗ ಅವರನ್ನು ಸೇವೆಯಿಂದ ವಿಮುಕ್ತಿಗೊಳಿಸುವ ಆಜ್ಞೆಯನ್ನು ಹೊರಡಿಸಿದ್ದಾರೆ. ಇದಕ್ಕೆ ತಡೆಯಾಜ್ಞೆ ನೀಡಿ ಬಡವರ ಬಗ್ಗೆ ಸರ್ಕಾರ ಕಾಳಜಿ ಪಹಿಸುತ್ತದೆಯೆ?

ಶ್ರೀ ಬಿ. ಆರ್. ಯಾಪಲ್. —ಮಾನ್ಯ ಸದಸ್ಯರು ಹೇಳಿದ ಹಾಗೆ ನಾನೂ ಹೇಳುತ್ತಿದ್ದೇನೆ. ಅವರು ಅಷ್ಟು ಸಂಖ್ಯೆಯಲ್ಲಿದ್ದಾರೆ. ಆದರೆ ಅಷ್ಟು ಜನ ಸೇವಕರನ್ನು ಪಂಚಾಯಿತಿಯ ನೌಕರರೆಂದು

ವಿಭಾಗಾಧಿಕಾರಿಗಳ ಅನುಮತಿ ಪಡೆಯದೆ ನೇಮಕ ಮಾಡಿದಂತಹ ಪ್ರಸಂಗಗಳು ಇವೆ. ಅವನ್ನು ನೋಡಿ ಆಡಿಟ್ ಅಬ್‌ಜಕ್ಷನ್ ಬಂತು. ಆಗ ಅವುಗಳ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ವಿಭಾಗಾಧಿಕಾರಿಗಳಿಗೆ ಸೂಚಿಸಿದ್ದುದು ನಿಜ. ಈ ಬಗ್ಗೆ ಮಾನ್ಯ ಸದಸ್ಯರು ರೂಲ್ ೩೩ರ ಅಡಿಯಲ್ಲಿ ಕೂಡ ವಿಷಯವನ್ನು ಕಳಂಹಿಸಿದ್ದಾರೆ. ಅದರ ನಂತರ, ಅಲ್ಲಿ ಯಾರು ಅವಶ್ಯವಾಗಿ ಬೇಕಾಗಿದ್ದಾರೋ ಅವರ ಸೇವೆಯನ್ನು ಮುಂದುವರಿಸುವುದಕ್ಕೆ ಸೂಚನೆ ಕೊಟ್ಟು ಮತ್ತು ಬೇರೆ ರೀತಿಯಿಂದ ಸೇವೆ ಮಾಡಿದ ಜನರ ಬಗ್ಗೆ ಮಾಹಿತಿ ತರಿಸಿಕೊಂಡು ಕ್ರಮ ಕೈಗೊಳ್ಳುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಕೆ. ವಸಂತ ಬಂಗೇರ —ಮೈಸೂರು ವಿಭಾಗಾಧಿಕಾರಿಗಳು ಹೊರಡಿಸಿರುವ ಆಜ್ಞೆಗೆ ತಕ್ಷಣ ತಡೆಯಾಜ್ಞೆ ಕೊಡಿ. ತದನಂತರ ಏನು ವ್ಯವಸ್ಥೆ ಮಾಡುತ್ತಾರೋ ಮಾಡಲಿ.

ಶ್ರೀ ಬಿ.ಆರ್. ಯಾವಗಲ್.—ಇದು ಬಹಳ ದೊಡ್ಡ ಸಮಸ್ಯೆಯಾಗಿದೆ. ಇದು ಮೈಸೂರು ವಿಭಾಗಕ್ಕೆ ಮಾತ್ರ ಸೀಮಿತವಾದುದಲ್ಲ. ಆದ್ದರಿಂದ ಈ ಸಮಸ್ಯೆಯನ್ನು ಮುಂದೆ ಜಿಲ್ಲಾಪರಿಷತ್ತು ಮತ್ತು ಮಂಡಲ್ ಪಂಚಾಯತ್ ಮಸೂದೆಗಳು ಬಂದಾಗ ಪರಿಶೀಲಿಸಬೇಕೆಂಬ ಉದ್ದೇಶ ಮತ್ತು ಆಶಯ ಇದೆ.

ಶ್ರೀ ಕೆ. ವಸಂತ ಬಂಗೇರ.—ಅವರು ಕಳೆದ ೨೦-೨೫ ವರ್ಷಗಳಿಂದ ಕೇವಲ ೨೦-೩೦ ರೂಪಾಯಿಗಳ ಸಂಬಳ ಪಡೆಯುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಸರಿಯಾದ ಉತ್ತರ ಕೊಡುತ್ತಿಲ್ಲ. ಬಡವರ ಬಗ್ಗೆ ಕಾಳಜಿ ವಹಿಸುತ್ತಿಲ್ಲ. ಸೇವೆಯಿಂದ ವಿಮುಕ್ತಿಗೊಳಿಸಿರುವ ಬಗ್ಗೆ ತಡೆಯಾಜ್ಞೆಯನ್ನು ಏತಕ್ಕೆ ಕೊಡುತ್ತಿಲ್ಲ.

ಶ್ರೀ ಬಿ. ಆರ್. ಯಾವಗಲ್.—ನೇಮಕಾತಿ ಮಾಡಿದ್ದದು ಸರಿಯಿಲ್ಲ. ಈ ಸಮಸ್ಯೆ ದೊಡ್ಡದಾಗಿದೆ, ಮೈಸೂರು ಸೀಮೆಗೆ ಮಾತ್ರ ಇದು ಸೀಮಿತವಾದುದಲ್ಲ. ಯಾರು ಯಾರ ಸೇವೆ ಅಗತ್ಯವಿದೆ ಅವರನ್ನೆಲ್ಲಾ ಮುಂದುವರಿಸಂವುದಕ್ಕೆ ಸೂಚನೆ ಕೊಟ್ಟಿದ್ದೇವೆ, ಉಳಿದ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಕೆ. ವಸಂತ ಬಂಗೇರ.—ಇವರ ಆಜ್ಞೆ ಪ್ರಕಾರ ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಹಾಕಿದ ಹಾಗೆ ಆಗುತ್ತದೆ ಕೆಲವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಾರಂತೆ, ಕೆಲವರನ್ನು ಬಿಡುತ್ತಾರಂತೆ, ಈಗ ಜಾರಿ ಕೊಟ್ಟಿರುವುದಕ್ಕೆ ತಡೆಯಾಜ್ಞೆಯನ್ನು ಏತಕ್ಕೆ ಕೊಡುತ್ತಿಲ್ಲ? ಕೂಡಲೇ ತಡೆಯಾಜ್ಞೆ ಕೊಟ್ಟು ವಿಚಾರವನ್ನು ಪರಿಶೀಲನೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಆರ್. ಯಾವಗಲ್.—ಇವರ ನೇಮಕಾತಿ ಆಗಬೇಕಾದರೆ ಪಂಚಾಯಿತಿ ಆಕ್ಟ್ ಪ್ರಕಾರ ವಿಭಾಗಾಧಿಕಾರಿಗಳ ಅನುಮತಿ ಪಡೆದು ನೇಮಕ ಮಾಡಬೇಕಾಗಿತ್ತು. ಅದನ್ನು ಬಿಟ್ಟು ಪಂಚಾಯಿತಿಗಳು ತಮಗೆ ಬೇಕಾದ ಹಾಗೆ ಮಾಡಿ ಈಗ ಅವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ ಎಂದೂ ಕೇಳುವುದು ಸರಿಯಲ್ಲ. ಅವರು ಕೇಳಿದ ಪ್ರಕಾರ ಮಾಡಿದರೆ ಅದು ಕಾಯಿದೆಗೆ ಅನುಗುಣವಾಗುವುದಿಲ್ಲ. ಆದ್ದರಿಂದ ಅದನ್ನು ಪರಿಶೀಲನೆ ಮಾಡಿ ನೋಡಬೇಕಾಗುತ್ತದೆ. ಆ ದೃಷ್ಟಿಯಿಂದ ಯಾವ ರೀತಿ ಮಾಡಬಹುದೆಂಬುದನ್ನು ಆಲೋಚನೆ ಮಾಡಿ ಮಾಡಬೇಕಾಗುತ್ತದೆ. ಆದ್ದರಿಂದ ಇದರ ಬಗ್ಗೆ ತಕ್ಷಣ ಸಂಪೂರ್ಣ ತಡೆಯಾಜ್ಞೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ಅವರು ಸುಮಾರು ಹದಿನಾರು ವರ್ಷಗಳಿಂದ ಇವರು ಸೇವೆ ಸಲ್ಲಿಸುತ್ತಿದ್ದಾರೆ.

ಅಧ್ಯಕ್ಷರು.—ನಾನು ಮೊದಲೇ ಹೇಳಿದ್ದೇನೆ. ಬೇರೆಯವರಿಗೆ ಅವಕಾಶ ಮಾಡಿಕೊಡುವುದಿಲ್ಲ ಪ್ರಶ್ನೆ ಹಾಕಿದವರಿಗೆ ಮಾತ್ರ ಅವಕಾಶ ಕೊಡುತ್ತೇನೆ. ದಯವಿಟ್ಟು ತಾವು ಕುಳಿತುಕೊಳ್ಳಿ. ನಾನು ಪಂಚಾಪತಿಯವರನ್ನು ಕರೆದಿದ್ದೇನೆ.

ಶ್ರೀ ಬಿ.ಎ. ಉಮರಬ್ಬ.—ಇದು ಬದುಕಿನ ಪ್ರಶ್ನೆ. ಅವರಿಗೆ ಬೇರೆ ಕಡೆಯಲೂ ಕೆಲಸ ಸಿಗುತ್ತಿಲ್ಲ.

ಅಧ್ಯಕ್ಷರು.—ಈ ತರಹ ತಾವು ಎದ್ದು ಮಾತನಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಬಿ. ಎ. ಉಮರಬ್ಬ.—ಇದು ಮಾನವೀಯತೆ ದೃಷ್ಟಿಯಿಂದ ನೋಡಬೇಕಾದ ಪ್ರಶ್ನೆ. ಅವಶ್ಯಕವಿದ್ದ ಕಡೆ ಮಾಡುತ್ತೇವೆ ಎಂದೂ ಮಂತ್ರಿಗಳು ಹೇಳುತ್ತಾರೆ. ಅವಶ್ಯಕ ಅನಾವಶ್ಯಕ ಎಂಬು

ದನ್ನು ಯಾವರೀತಿ ತೀರ್ಮಾನ ಮಾಡುತ್ತಾರೆ? ಈ ಮಧ್ಯೆ ಎಷ್ಟು ಕಂಟಿಂಜೆಗಳು ತೊಂದರೆ ಪಡಬೇಕು? ೨೦, ೩೦, ೪೦ ರೂಪಾಯಿಗಳಿಗೆ ಹಲವಾರು ವರ್ಷಗಳಿಂದ ಸೇವೆ ಮಾಡಿದ್ದಕ್ಕೆ ಇದು ಕೊಡುಗೆಯೇ?

ಶ್ರೀ ಬಿ ಎಸ್. ಯಡಿಯೂರಪ್ಪ.—ಮೊದಲು ಇದಕ್ಕೆ ತಡೆಯಾಜ್ಞೆ ಕೊಡಲಿ. ನಂತರ ತೀರ್ಮಾನ ತೆಗೆದುಕೊಳ್ಳಲಿ.

ಅಧ್ಯಕ್ಷರು. – ಇದನ್ನು ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ ಕುಳಿತುಕೊಳ್ಳಿ. ಆವರೂ ಉತ್ತರ ನೋಡಿಕೊಂಡು ಬರಲಿ. ನಿಮಗೂ ಅವಕಾಶ ಸಿಗುತ್ತದೆ.

ದಾವಣಗೆರೆ ನಗರದಲ್ಲಿರುವ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಸಂಖ್ಯೆ

೨೪೯. ಶ್ರೀ ಪಂಪಾಪತಿ(ದಾವಣಗೆರೆ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ದಯೆಯಿಟ್ಟು ಉತ್ತರಿಸುವರೇ ?

ಅ) ದಾವಣಗೆರೆ ನಗರದಲ್ಲಿರುವ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಸಂಖ್ಯೆ ಎಷ್ಟು ? ಹಾಗೂ ಸದರಿ ವಿದ್ಯಾಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ಅನುಗುಣವಾಗಿ ಉಪಾಧ್ಯಾಯರುಗಳು ಇದ್ದಾರೆಯೆ ಹಾಗೂ ಕೊರತೆಗಳಿವೆಯೇ ?

ಆ) ಹಾಗಿಲ್ಲದಿದ್ದಲ್ಲಿ, ಸರಕಾರದವರು ಈ ಬಗ್ಗೆ ಕೈಕೊಂಡ ಕ್ರಮಗಳೇನು ?

ಶ್ರೀ ಎಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ೨೯
ಪ್ರೌಢ ಶಾಲೆಗಳ ಸಂಖ್ಯೆ ೫

ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ೬೪ ಉಪಾಧ್ಯಾಯರುಗಳ ಕೊರತೆ ಇರುತ್ತದೆ. ೧೯ ಪ್ರಾಥಮಿಕ ಶಾಲೆಗಳು ಸ್ವಂತ ಕಟ್ಟಡವನ್ನು ಹೊಂದಿರುವುದಿಲ್ಲ.

ಆ) ಹೆಚ್ಚುವರಿ ಶಿಕ್ಷಕರು ಇರುವ ಶಾಲೆಗಳಿಂದ ನಿಯೋಜನೆ ಮೂಲಕ ಶಿಕ್ಷಕರ ಕೊರತೆಯನ್ನು ನಿವಾರಿಸಲಾಗಿದೆ.

ಸ್ವಂತ ಕಟ್ಟಡವಿಲ್ಲದ ಎಲ್ಲಾ ೧೯ ಶಾಲೆಗಳೂ ಬಾಡಿಗೆ ಕಟ್ಟಡಗಳಲ್ಲಿ ಕೆಲಸ ನಿರ್ವಹಿಸುತ್ತದೆ.

ಶ್ರೀ ಪಂಪಾಪತಿ.— ಅಧ್ಯಕ್ಷರೆ, ಹೆಚ್ಚುವರಿ ಶಿಕ್ಷಕರು ಇರುವ ಶಾಲೆಗಳಿಂದ ನಿಯೋಜನೆ ಮಾಡುವುದರಿಂದ ಶಿಕ್ಷಕರ ಕೊರತೆ ನಿವಾರಿಸಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಇವರ ಅಭಿಪ್ರಾಯದ ಪ್ರಕಾರ ಯಾವ ಶಾಲೆಯಲ್ಲಿಯೂ ಶಿಕ್ಷಕರ ಕೊರತೆ ಇಲ್ಲ ಎಂಬ ಅಭಿಪ್ರಾಯ ಬರುತ್ತದೆ. ಒಂದೊಂದು ತರಗತಿಯಲ್ಲಿ ಎಷ್ಟು ವಿದ್ಯಾರ್ಥಿಗಳಿರಬೇಕು ಎಂಬುದನ್ನು ನಿಗದಿ ಮಾಡಿದ್ದೀರಾ ? ಈ ಬಗ್ಗೆ ಮಂತ್ರಿಗಳು ಉತ್ತರ ಹೇಳಬೇಕು. ದಾವಣಗೆರೆಯಲ್ಲಿ ಶಿಕ್ಷಕರ ಕೊರತೆ ಇದೆ. ಮಾನ್ಯ ಮಂತ್ರಿಗಳಿಗೆ ಸರಿಯಾಗಿ ಮಾಹಿತಿ ಕೊಟ್ಟಿಲ್ಲ ಎಂಬುದು ನನ್ನ ಅಭಿಪ್ರಾಯ. ತಾವು ಸರಿಯಾಗಿ ಮಾಹಿತಿಯನ್ನು ತರಿಸಿಕೊಂಡು ಸೂಕ್ತ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ೧೯ ಶಾಲೆಗಳಿಗೆ ಸ್ವಂತ ಕಟ್ಟಡವಿಲ್ಲದ ಪ್ರಯುಕ್ತ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಇದು ಬಹಳ ನಾದುರಸ್ತಿಯಲ್ಲಿದೆ. ಮಳೆ ಬಂದರೆ ಸೋರುತ್ತಿದೆ. ಯಾವ ಸಂದರ್ಭದಲ್ಲಿ ಕಟ್ಟಡಗಳು ಬಿದ್ದು ಮಕ್ಕಳಿಗೆ ಅನಾಹುತವಾಗುತ್ತದೆಯೋ ಗೊತ್ತಿಲ್ಲ. ಅಂಥ ಕಟ್ಟಡಗಳನ್ನು ದಯವಿಟ್ಟು ಆದಷ್ಟು ದುರಸ್ತಿ ಮಾಡಿ ಸುವ್ಯವಸ್ಥಿತ ವ್ಯವಸ್ಥೆಯನ್ನು ಮಾಡುವುದಕ್ಕೆ ತೀವ್ರಗತಿಯಲ್ಲಿ ಏನು ಕಾರ್ಯಕ್ರಮ ಕೈಗೊಳ್ಳುತ್ತೀರಿ ಎಂಬುದನ್ನು ತಿಳಿಸಬೇಕು ?

ಶ್ರೀ ಎಚ್. ಜಿ. ಗೋವಿಂದೇಗೌಡ.— ಹೆಚ್ಚುವರಿ ಇರತಕ್ಕ ಶಾಲೆಗಳಿಂದ ಉಪಾಧ್ಯಾಯರನ್ನು ನಿಯೋಜನೆ ಮಾಡತಕ್ಕ ವ್ಯವಸ್ಥೆ ಬಗ್ಗೆ ಈಗಾಗಲೇ ಹೇಳಿದ್ದೇನೆ. ನಮ್ಮ ಸ್ನೇಹಿತರು ಹೇಳಿದ ಹಾಗೆ ಟೌನ್‌ಗಳಲ್ಲಿ ಕೆಲವು ಕಡೆ ಹೆಚ್ಚು ಉಪಾಧ್ಯಾಯರಿದ್ದಾರೆ. ಆ ಉಪಾಧ್ಯಾಯರನ್ನು ಕಡಿಮೆ ಸಂಖ್ಯೆಯಿರುವ ಕಡೆ ನಿಯೋಜನೆ ಮಾಡುವ ವ್ಯವಸ್ಥೆಯನ್ನು ದಾವಣಗೆರೆಯಲ್ಲಿ ಮಾಡಿದ್ದೇವೆ. ಎರಡನೇಯ ಪ್ರಶ್ನೆಗೆ ಉತ್ತರ, ೫೦ ಜನ ಮಕ್ಕಳಿಗೆ ಒಬ್ಬರು ಉಪಾಧ್ಯಾಯರು ಇರಬೇಕೆಂದು ಕಾನೂನಿನಲ್ಲಿ ವ್ಯವಸ್ಥೆ ಮಾಡಲಾಗಿದೆ. ಈಗಾಗಲೇ ೧೮ ಸಾವಿರ ಜನ ಉಪಾಧ್ಯಾಯರುಗಳನ್ನು ಏನು ನೇಮಕ ಮಾಡಿದ್ದೇವೆ ಅದು ಸಂಪೂರ್ಣವಾಗಿ ಸಾಕಾಗುವುದಿಲ್ಲ. ಮಕ್ಕಳ ಸಂಖ್ಯೆಗನುಗುಣವಾಗಿ ಇನ್ನೂ ಹೆಚ್ಚು ಬೇಕು.